O.S.No.:379/2017

P.W.:1

ಈ ದಿನ ದಿಃ 05-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಸ್ ಬಿ ವಕೀಲರಿಂದಃ

1) ಮಾಲುತಾಯಿಯವರು ವಿ ಪಿ ಸಿ ನಂಬರ 6/144 ರ ಮನೆಯ ಪೂರ್ವ ಗೋಡೆಗೆ ಬಾಗಿಲು ಮತ್ತು ಕಿಡಿಕಿ ಇದೆಯಾ ಎಂದರೆ ಇದೆ. ಸದರಿ ಮನೆಯ ದಕ್ಷಿಣಕ್ಕೆ ಪಂಚಾಯತಿ ರಸ್ತೆ ಇದೆ ಎಂದರೆ ಸರಿ. ಸದರಿ ಮನೆಯ ಪೂರ್ವಕ್ಕೆ ಖುಲ್ಲಾ ಜಾಗೆ ನಂಬರ 7/435 ಇದೆ ಎಂದರೆ ಸರಿ. ಸದರಿ ಜಾಗೆ ಪಂಚಾಯತಿಗೆ ಸೇರಿರುವ ಜಾಗ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಉತಾರ ಪತ್ರಿಕೆಯನ್ನು ತೆಗೆದು ನಾನು ನೋಡಿರುತ್ತೇನೆ . ನಾನು ರೀತಿಯಾಗಿ ಪಂಚಾಯತಿಗೆ ಸೇರಿರುವ ಖುಲ್ಲಾ ಜಾಗ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಾಲುತಾಯಿಯವರು ವಿ ಪಿ ಸಿ ನಂಬರ 6/144 ರ ಮನೆಯ ಯಾವ ಕಟ್ಟಿರುತ್ತಾರೆ ಎಂದರೆ 50 ವರ್ಷಗಳು ಆಗಿರುತ್ತವೆ. ಸದರಿ ಮನೆ ನಿರ್ಮಾಣ ಮಾಡಲು ಅನುಮತಿ ಪಡೆದುಕೊಂಡಿರುತ್ತಾರೆ ಎಂದರೆ ತೆಗೆದುಕೊಂಡಿರುತ್ತಾರೆ. ಸಾಕ್ಷಿ ಮುಂದುವರೆದು ಪಂಚಾಯತಿಯವರೆ ಸದರಿ ಮನೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆಯನ್ನು ಹಾಜರು ಮಾಡಿದ್ದಿರಿ ಎಂದರೆ ನಮ್ಮ ವಕೀಲರಿಗೆ ಗೊತ್ತು ಎಂದು ನುಡಿಯುತ್ತಾರೆ.

2) ವಿ ಪಿ ಸಿ ನಂಬರ 6/144 ರಲ್ಲಿ ದಿಃ23-07-2017 ರಂದು ಸಾರ್ವಜನಿಕರು ಅದು ಖುಲ್ಲಾ ಜಾಗ ಇದೆ ಎಂದು ಅರ್ಜಿ ನೀಡಿದ್ದು ಅದರಂತೆ ರೆಜಲೋಶನ್ ಆಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಖುಲ್ಲಾ ಜಾಗಕ್ಕೆ ನಂಬರ 7/435 ಅನ್ನು ಕೊಡಲಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿ ಕೂಲಿ ಕೆಲಸ ಮಾಡುತ್ತಾರೆ ಮತ್ತು ಅವರಿಗೆ ಜಮೀನುಗಳು ಇಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ . ಖುಲ್ಲಾ ಜಾಗ ನಂಬರ 7/435 ಪಕ್ಕದಲ್ಲಿ ಪೂರ್ವಕ್ಕೆ ಪಂಚಾಯತಿ ರಸ್ತೆ ಇದೆ ಎಂದರೆ ಸರಿ. ಅದರ ಪಕ್ಕಕ್ಕೆ ಮುಂಬಾಗದಲ್ಲಿ ಅಂಬೇಡ್ಕರ ಭವನ ಇದೆ ಎಂದರೆ ಸರಿ. ಖುಲ್ಲಾ ಜಾಗ ನಂಬರ 7/435 ರಲ್ಲಿ ಪ್ರತಿವಾದಿಯು ಪೂರ್ವಕ್ಕೆ ಮುಖ ಮಾಡಿ 8 X 8 ರ 2007 ರಲ್ಲಿ ಒಂದು ಪಾನ ಶಾಪ್ ಅಂಗಡಿ ಹಾಕಿರುತ್ತಾರೆ ಎಂದರೆ ಸರಿ . ಪ್ರತಿವಾದಿಯ ಆ ಅಂಗಡಿಯ ಆದಾಯ ಮೇಲೆ ಉಪ ಜೀವನ ನಡೆಸುತ್ತಿದ್ದಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

3) ಸದರಿ ಅಂಗಡಿಯನ್ನು ಪ್ರತಿವಾದಿಯು ಗ್ರಾಮ ಪಂಚಾಯತಿಯ ಮೌಖಿಕ ಪರವಾಣಿಗೆ ಮೇರೆಗೆ ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪಂಚಾಯತಿ ಅಧಿಕಾರಿಗಳು ಸಾರ್ವಜನಿಕರಿಗೆ ಅವಶ್ಯಕತೆ ಬಿದ್ದಾಗ ಸದರಿ ಅಂಗಡಿಯನ್ನು ಬಿಡಬೇಕು ಎನ್ನುವ ಷರತ್ತಿನೊಂದಿಗೆ ಅನುಮತಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ವಿ ಪಿ ಸಿ ನಂಬರ 6/144 ರಲ್ಲಿ ಅತಿ ಕ್ರಮಣ ಮಾಡಿ ಪ್ರತಿವಾದಿಯು ಪಾನ ಅಂಗಡಿ ಕೊಕಾ ಇಟ್ಟಿಲ್ಲ ಮತ್ತು ಅಡಚಣೆ ಮಾಡಿಲ್ಲ ಎಂದರೆ ಸರಿಯಲ್ಲ. ಅವರು ಸದರಿ ಅಂಗಡಿಯನ್ನು ಸದರಿ ಆಸ್ತಿಯಲ್ಲಿ ಇಡದೆ ಇದ್ದ ಕಾರಣಕ್ಕಾಗಿ ಅದನ್ನು ತೆಗೆಯುವ ಪ್ರಶ್ನೆ

ಬರುವುದಿಲ್ಲ  ಎಂದರೆ ಸರಿಯಲ್ಲ.  ಪ್ರತಿವಾದಿಯು ವಿ ಪಿ ಸಿ ನಂಬರ 6/144 ರಲ್ಲಿ ನಮಗೆ ಗೊತ್ತಿಲ್ಲದೆ ನಾನು ಹೊಲಕ್ಕೆ ಹೋಗಿದ್ದಾಗ ಪಾನ್ ಶಾಪ್ ಅಂಗಡಿಯನ್ನು ಇಟ್ಟಿದ್ದಾನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.
4) ನಾನು ಪ್ರತಿವಾದಿಯವರಿಗೆ ತೊಂದರೆ ಕೊಡಬೇಕೆಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ.